ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 6/12/20

ಕೃಷಿ ಕಾಯಿದೆಗಳಿಗೆ ರೈತರು ಸೂಚಿಸಿದ ನಾಲ್ಕು ತಿದ್ದುಪಡಿ...

# ಸಂಸತ್ ವಿಶೇಷ ಅಧಿವೇಶನ ಸಾಧ್ಯತೆ

ಹೊಸದಿಲ್ಲಿ: ತೀವ್ರ ಚಳಿಯ ನಡುವೆಯೂ ರೈತರ ಪ್ರತಿಭಟನೆಯ ಕಿಚ್ಚು ಹೆಚ್ಚುತ್ತಿರುವುದರಿಂದ ಕಳವಳಕ್ಕೆ ಈಡಾಗಿರುವ ಕೇಂದ್ರ ಸರಕಾರ, ಸಂಸತ್ತಿನ ವಿಶೇಷ ಅಧಿವೇಶನ ಕರೆದು ರೈತರ ಆತಂಕಕ್ಕೆ ಕಾರಣವಾಗಿರುವ ನೂತನ ಕೃಷಿ ಕಾಯಿದೆಗಳ ಕೆಲವು ಭಾಗಗಳನ್ನು ತಿದ್ದುಪಡಿ ಮಾಡಲು ಚಿಂತನೆ ನಡೆಸಿದೆ.

ದಶಕಗಳಿಂದ ಬೆಲೆ ವಂಚನೆಗೆ ತುತ್ತಾಗಿ ಸಾಲದ ಸುಳಿಗೆ ಸಿಲುಕಿದ್ದ ರೈತ ಸಮುದಾಯವನ್ನು ಸಂಕಷ್ಟದಿಂದ ಪಾರುಗಾಣಿಸಲು ಚಿಂತಿಸಿ ನೂತನ ಕೃಷಿ ಸುಧಾರಣಾ ಕಾಯಿದೆಗಳನ್ನು ಜಾರಿಗೊಳಿಸಲಾಗಿದೆ. ಈಗ ಆ ಕಾಯಿದೆಗಳಲ್ಲಿಯೇ ಲೋಪ ಇದೆ ಎಂದು ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಇತರ ಕೆಲವು ರಾಜ್ಯಗಳ ರೈತರೂ ಕೈಜೋಡಿಸಿದ್ದಾರೆ. ವಿಶೇಷವಾಗಿ ಬೆಂಬಲ ಬೆಲೆ ವ್ಯವಸ್ಥೆ ನಾಶಗೊಳ್ಳುತ್ತದೆ ಎನ್ನುವ ಆತಂಕ ರೈತರನ್ನು ಕಾಡುತ್ತಿದೆ. ಆ ಎಲ್ಲಾ ಸಮಸ್ಯೆಗಳಿಗೂ ಸರಕಾರ ಸ್ಪಂದಿಸಿ ಸೂಕ್ತ ಪರಿಹಾರ ನೀಡಲು ಸಿದ್ಧವಿದೆ ಎಂದು ಸರಕಾರದ ಮೂಲಗಳು ತಿಳಿಸಿವೆ.

ತಿದ್ದುಪಡಿ ಸಾಧ್ಯತೆಗಳ ಬಗ್ಗೆ ಈಗಾಗಲೇ ರೈತ ಪ್ರತಿನಿಧಿಗಳ ಜತೆಗೆ ಸರಕಾರ ಚರ್ಚೆ ಮಾಡಿದೆ. ಆದರೆ, ಜಾರಿಗೊಳಿಸಿರುವ ಮೂರೂ ಕೃಷಿ ಕಾಯಿದೆಗಳನ್ನು ಸಾರಾಸಗಟು ರದ್ದುಗೊಳಿಸಿ ಎನ್ನುವುದು ರೈತ ಪ್ರತಿನಿಧಿಗಳ ಹಠವಾಗಿದೆ. ಇಂತಹ ವ್ಯರ್ಥ ಹಠಕ್ಕೆ ಬಗ್ಗದಿರಲು ಸರಕಾರ ನಿರ್ಧರಿಸಿದೆ. ರೈತರ ನಾಲ್ಕು ಬೇಡಿಕೆಗಳು ಪರಿಶೀಲನೆಗೆ ಅರ್ಹ ಎನಿಸಿದ್ದು, ಅವುಗಳ ಬದಲಾವಣೆಗೆ ಮಾತ್ರ ಪ್ರಯತ್ನಿಸಲು ಸರಕಾರ ಮನಸ್ಸು ಮಾಡಿದೆ. ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆಯಲ್ಲಿ 22 ಬೆಳೆಗಳಿಗೆ ಬೆಲೆ ಖಾತ್ರಿ ನೀಡುವ ನಿಯಮದಲ್ಲಿನ ಗೊಂದಲವೇ ರೈತರ ಈಗಿನ ಪ್ರತಿಭಟನೆಗೆ ಪ್ರಧಾನ ಕಾರಣವಾಗಿದೆ. ಇದನ್ನು ಬದಲಾಯಿಸಿ, ಎಂಎಸ್‌ಪಿಯನ್ನು ಇನ್ನಷ್ಟು ಬಲಪಡಿಸುವ ಕುರಿತು ಸರಕಾರ ಚಿಂತನೆ ನಡೆಸಿದೆ. ಗುತ್ತಿಗೆ ಆಧಾರಿತ ಕೃಷಿ ಮತ್ತು ಸರಕಾರೇತರ ಮಾರುಕಟ್ಟೆಯಲ್ಲಿ ಖಾಸಗಿ ಖರೀದಿದಾರರಿಗೆ ಅವಕಾಶ ನೀಡಿರುವುದಕ್ಕೆ ಸಂಬಂಧಿಸಿದಂತೆಯೂ ರೈತರ ತಕರಾರು ಪ್ರಬಲವಾಗಿದೆ. ಈ ನಿಯಮಗಳ ಬದಲಾವಣೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

**ಪ್ರತಿತಂತ್ರವೂ ಹೌದು:** ರೈತರ ಪ್ರತಿಭಟನೆಯ ಹಿಂದೆ ಪ್ರತಿಪಕ್ಷಗಳ ಕುಮ್ಮಕ್ಕು ಇರುವುದು ಈಗ ಬಹಿರಂಗ ಸತ್ಯ. ಇದರಿಂದಾಗಿ ಮಾತುಕತೆ ಮೂಲಕ ಇತ್ಯರ್ಥಗೊಳ್ಳಬಹುದಾಗಿದ್ದ ಬಿಕ್ಕಟ್ಟುಗಳು ಜಟಿಲ ಸ್ವರೂಪಕ್ಕೆ ತಿರುಗಿವೆ. ಇದನ್ನು ಹತ್ತಿಕ್ಕಲು ಅವರದ್ದೇ ಧಾಟಿಯಲ್ಲಿ ಪ್ರತಿತಂತ್ರ ಹೂಡಲು ಸರಕಾರ ನಿರ್ಧರಿಸಿದೆ. ಈ ವಿಶೇಷ ಅಧಿವೇಶನವು ಅದರ ಭಾಗವಾಗಿದೆ. ಅಧಿವೇಶನ ಕರೆದು ತಿದ್ದುಪಡಿ ನಿಯಮಗಳನ್ನು ಚರ್ಚಿಸಿ, ಸುಲಭವಾಗಿ ಸಂಸತ್ತಿನ ಅನುಮೋದನೆ ಗಿಟ್ಟಿಸುವ ಸಾಮರ್ಥ್ಯ ಸರಕಾರಕ್ಕೆ ಇದೆ. ಹಾಗೊಮ್ಮೆ ಸಂಸತ್ತಿನ ಅನುಮತಿ ಪಡೆದರೆ ಪ್ರತಿಪಕ್ಷಗಳ ತಂತ್ರ ಅಡಗುತ್ತದೆ. ಜತೆಗೆ ರೈತರ ಬೀದಿ ಪ್ರತಿಭಟನೆಗಳಿಗೂ ಬ್ರೇಕ್ ಬೀಳುತ್ತದೆ ಎನ್ನುವ ಲೆಕ್ಕಾಚಾರ ಸರಕಾರದ್ದಾಗಿದೆ.



ದಿಲ್ಲಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರ ಜತೆಗೆ ಶನಿವಾರ ಅವರ ಮಕ್ಕಳೂ ಕೈ ಜೋಡಿಸಿದ್ದಾರೆ.



ಪ್ರತಿಭಟನೆಯಲ್ಲಿ ಭಾಗವಹಿಸಲು ಬಂದಿರುವ ರೈತರ ಮಕ್ಕಳು ಧರಣಿ ಸ್ಥಳದಿಂದಲೇ ಆನ್‌ಲೈನ್ ತರಗತಿಯಲ್ಲಿ ಭಾಗವಹಿಸುತ್ತಿದ್ದಾರೆ.

## ಕೆನಡಾ ಹೇಳಿಕೆಗೆ ತರಾಟೆ

ರೈತ ಪ್ರತಿಭಟನೆ ಬಗ್ಗೆ ಕೆನಡಾ ಮರು ಹೇಳಿಕೆ ನೀಡಿದ್ದು ಹೋರಾಟಕ್ಕೆ ತನ್ನ ಸಂಪೂರ್ಣ ಬೆಂಬಲ ಇರುವುದಾಗಿ ತಿಳಿಸಿದೆ. ಇದಕ್ಕೆ ಬಿಜೆಪಿಯು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ''ಇದು ಬೂಟಾಟಿಕೆ ಮಾತು. ನಮ್ಮ ದೇಶದ ಆಂತರಿಕ ವಿಷಯದಲ್ಲಿ ತಲೆ ಹಾಕಬೇಡಿ ಎಂದು ಎಚ್ಚರಿಕೆ ನೀಡಿದರೂ ಅದನ್ನು ಕಡೆಗಣಿಸಿ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೆ ಉದ್ಧಟತನ ಪ್ರದರ್ಶಿಸಿದ್ದಾರೆ. ಇದು ತೀರಾ ಅಕ್ಷಮ್ಯ,'' ಎಂದು ಪಕ್ಷದ ವಿದೇಶಾಂಗ ವಿಭಾಗದ ಉಸ್ತುವಾರಿ ವಿಜಯ್ ಚೌಥೈವಾಲೆ ಹೇಳಿದ್ದಾರೆ. ಅಲ್ಲದೇ ಸೋಮವಾರ ಕೆನಡಾ ನೇತೃತ್ವದಲ್ಲಿ ನಡೆಯುವ ಕೊರೊನಾ ನಿಯಂತ್ರಣ ಕುರಿತ ಸಭೆಯನ್ನು ಬಹಿಷ್ಕರಿಸಲೂ ಭಾರತ ತೀರ್ಮಾನಿಸಿದೆ. ಏತನ್ಮಧ್ಯೆ, ಬ್ರಿಟನ್‌ನ ಸಂಸದರ ತಂಡ ಕೂಡ ರೈತ ಪ್ರತಿಭಟನೆ ಬಗ್ಗೆ ಇಂತಹದ್ದೇ ವ್ಯತಿರಿಕ್ತ ಧೋರಣೆ ತಳೆದಿದ್ದು, ಭಾರತದ ಮೇಲೆ ಒತ್ತಡ ಹೇರಲು ಒತ್ತಾಯಿಸಿ ತಮ್ಮ ದೇಶದ ವಿದೇಶಾಂಗ ಸಚಿವರಿಗೆ ಪತ್ರ ಬರೆದಿದ್ದಾರೆ.

## ರೈತರ ಮೌನ ವ್ರತ

ಸಭೆಯಲ್ಲಿ ಕೆಲವು ರೈತ ಮುಖಂಡರು 'ಮೌನ ವ್ರತ' ಆಚರಿಸುವ ಮೂಲಕ ಸರಕಾರ ತಮ್ಮ ಬೇಡಿಕೆಗಳಿಗೆ ನಿಖರ ಉತ್ತರ ನೀಡಬೇಕೆಂದು ಆಗ್ರಹಿಸಿದರು. ಸರಕಾರ ರೈತರ ಒಗ್ಗಟ್ಟನ್ನು ಒಡೆಯಲು ನೋಡುತ್ತಿದೆ ಎಂದು ಆರೋಪಿಸಿದ ರೈತ ಮುಖಂಡರು, ಬಾಯಿ ಮೇಲೆ ಬೆರಳಿಟ್ಟುಕೊಂಡು ಮೌನವಾಗಿರುವ ಮೂಲಕ ಮಾತುಕತೆಗೆ ಅಸಹಕಾರ ತೋರಿದರು.

## ಮತ್ತೆ ಸರಕಾರದ ಆಹಾರ ತಿರಸ್ಕಾರ

ಕಳೆದ ಬಾರಿಯ ಸಭೆಯಂತೆಯೇ ಈ ಬಾರಿಯೂ ರೈತರು ಸರಕಾರ ನೀಡಿದ ಆಹಾರ, ಚಹಾವನ್ನು ತಿರಸ್ಕರಿಸಿದರು. ತಾವೇ ತಂದಿದ್ದ ಆಹಾರವನ್ನು ಸೇವಿಸಿದರು. ಸಭೆಯಲ್ಲಿ 40 ರೈತ ಮುಖಂಡರ ಜತೆಗೆ ಕೃಷಿ ಸಚಿವ ನರೇಂದ್ರ ತೋಮರ್, ಸಹಾಯಕ ಕೃಷಿ ಸಚಿವ ಕೈಲಾಶ ಚೌದರಿ, ವಾಣಿಜ್ಯ ವ್ಯವಹಾರಗಳ ಸಚಿವ ಪಿಯೂಶ್ ಗೋಯಲ್, ವಾಣಿಜ್ಯ ವ್ಯವಹಾರಗಳ ಸಹಾಯಕ ಸಚಿವ ಸೋಮ್ ಪ್ರಕಾಶ್, ಕೃಷಿ ಸಚಿವಾಲಯದ ಕಾರ್ಯದರ್ಶಿ ಸೇರಿದಂತೆ ಹಿರಿಯ ಅಧಿಕಾರಿಗಳು ಪಾಲ್ಗೊಂಡರು.

## ಪ್ರಧಾನಿ ಜತೆ ಸಭೆ

ರೈತರೊಂದಿಗೆ ಮಾತುಕತೆ ಆರಂಭಕ್ಕೂ ಮುನ್ನ ಕೇಂದ್ರ ಸಚಿವರಾದ ನರೇಂದ್ರ ತೋಮರ್, ಪಿಯೂಶ್ ಗೋಯಲ್, ಅಮಿತ್ ಶಾ, ರಾಜನಾಥ್, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಪ್ರಧಾನಿ ಮೋದಿ ಅವರ ನಿವಾಸದಲ್ಲಿ ಸಭೆ ಸೇರಿ ಸಮಾಲೋಚನೆ ನಡೆಸಿದರು. ಇದು ವಿಶೇಷ ಅಧಿವೇಶನ ನಡೆಸುವ ಬಗ್ಗೆ ಕುತೂಹಲ ಹೆಚ್ಚಿಸಿದೆ.